ಅನುವಾದಿತ ಕತೆ

**ಇಂಗ್ಲಿಷ್ ಮೂಲ: ಎಡ್ಗರ್ ಅಲನ್ ಪೋ**
**ಕನ್ನಡಕ್ಕೆ: ಜೆ.ವಿ. ಕಾರ್ಲೊ**



# ನೀಲಿ ಕಣ್ಣಿನ ಮುದುಕ

ನಿಜ! ನಾನು ಮಾನಸಿಕವಾಗಿ ಬಹಳ, ಬಹಳವಾಗಿ ಗೊಂದಲಗೊಂಡಿದ್ದೆ, ಉದ್ವೇಗದಿಂದಿದ್ದೆ. ಈಗಲೂ ಕೂಡ ನಾನು ಅದೇ ಸ್ಥಿತಿಯಲ್ಲಿದ್ದೇನೆ. ಹಾಗಂತ ನೀವು ನನ್ನನ್ನು ಹುಚ್ಚನೆಂದು ಕರೆಯುವುದು ಎಷ್ಟು ಸರಿ? ಇದು ಕಾಯಿಲೆಯೋ ಅಥವಾ ಮತ್ತೇನೋ, ನನ್ನ ಗ್ರಹಣ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ ವಿನಃ ಕಿಂಚಿತ್ತೂ ಕುಂದಾಗಿಸಿಲ್ಲ. ನನ್ನ ಶ್ರವಣ ಶಕ್ತಿಯಂತೂ ನನಗೇ ಅಚ್ಚರಿ ಹುಟ್ಟಿಸುವಷ್ಟು ಅಧಿಕಗೊಂಡಿದೆ. ಆಕಾಶದಲ್ಲಿರುವ ಸ್ವರ್ಗದಿಂದಲೂ, ಪಾತಾಳದಲ್ಲಿರುವ ನರಕದಿಂದಲೂ, ಮಧ್ಯದ ಭೂಮಿಯಿಂದಲೂ ಹೊರಡುವ ಪ್ರತಿ ಶಬ್ದವೂ ನನಗೆ ಅತ್ಯಂತ ಸ್ಪಷ್ಟವಾಗಿ ಸ್ಫುಟವಾಗಿ ಕೇಳಿಸುತ್ತಿದೆ. ಹಾಗೆಂದ ಮೇಲೆ ನನ್ನನ್ನು ಹುಚ್ಚನೆನ್ನುವುದು ಸರಿಯೇ? ಎಷ್ಟೊಂದು ಶಾಂತಚಿತ್ತದಿಂದ, ಯಾವುದೇ ವಿಕಾರಗಳಿಲ್ಲದೆ ನಾನು ಇದನ್ನೆಲ್ಲಾ ಹೇಳುತ್ತಿದ್ದೇನೆಂದು ಕೇಳಿಸಿಕೊಳ್ಳಿ.

ಮೊಟ್ಟಮೊದಲು ಈ ವಿಚಾರ ನನ್ನ ಮನಸ್ಸಿಗೆ ಹೇಗೆ, ಎಲ್ಲಿಂದ ಹೊಕ್ಕಿತೋ ನಾನರಿಯೆ! ಹೊಕ್ಕಿದ ನಂತರವಂತೂ ಹಗಲು ರಾತ್ರಿ ನಿರಂತರವಾಗಿ ಇದೇ ಒಂದು ಗೀಳಾಯಿತು. ಇದು ನನ್ನ ಉದ್ದೇಶವೂ, ಅಥವಾ ಬೇರ್ಯಾವ ಮನೋವಿಕಾರವೂ ಖಂಡಿತ ಆಗಿರಲಿಲ್ಲ. ಮುದುಕನನ್ನು ನಾನು ನಿಜವಾಗಲೂ ತುಂಬಾ ಹಚ್ಚಿಕೊಂಡಿದ್ದೆ. ಪಾಪ, ನನಗೆ ಅವನೆಂದೂ ಕಿಂಚಿತ್ತೂ ಕೇಡನ್ನು ಬಯಸಿದವನೇ ಅಲ್ಲ, ಹೋಗಲಿ ಒಂದು ಕೆಟ್ಟ ಮಾತನ್ನೂ ಆಡಿದವನಲ್ಲ... ಅವನ ಐಶ್ವರ್ಯಕ್ಕಾಗಲೀ